Regd. No. M. 1299 ॥ ಸತ್ಯಾನ್ನಾಸ್ತಿ ಪದೋ ಧರ್ಮಃ ॥ ಬಿಡಿ ಪ್ರತಿ ೩ ಪೈ.

ಸತ್ಯವಾದಿ

ಆಫೀಸ್—ಚಾಮರಾಜ ಅಗ್ರಹಾರ, ಮೈಸೂರು ಪ್ರತಿ ಮಂಗಳವಾರವೂ ಪ್ರಕಟಿಸಲ್ಪಡುವುದು ವಾರ್ಷಿಕ ಜಂದಾ (ಅಂಚೆಯೆಚ್ಚಸೇರಿ) ರೂ 1—8—0

ಸಂಪುಟ ೭] ಮೈಸೂರು, ಮಂಗಳವಾರ, ೭ ನೆ ಜುಲೈ ೧೯೨೫. [ಸಂಚಿಕೆ ೨೮

ಕೆಲಾಮಂದಿರಂ, ಬೆಂಗಳೂರು ಸಿಟಿ

ಕ ಲಾ ಭ್ಯಾ ಸ

ಒಂದು ವರ್ಷದಲ್ಲಿ ಸ್ವತಂತ್ರವಾಗಿ ಜೀವನಮಾಡಲು ಸಮರ್ಥರಾಗುವಿರಿ.

ವಿದ್ಯಾರ್ಥಿ ವೇತನ ೩ ರಿಂದ ೭ ರೂಪಾಯಿನವರಿಗೆ

೧ ಇದೇ ಜುಲೈ ೧ ನೆ ತಾರೀಖಿನಿಂದ ಒಂದು ವರ್ಷ ಕಾಲ

೨ ವಿದ್ಯಾರ್ಥಿಗಳು ೧೩ ವರ್ಷಕ್ಕೆ ಮೇಲ್ಪಟ್ಟ ೨೫ ರ ವಳಗೆ ಇರತಕ್ಕದ್ದು ಮತ್ತು ಕನ್ನಡ ೩ ನೇ ತರಗತಿಯವರಿಗಾದರೂ ವ್ಯಾಸಂಗಮಾಡಿರತಕ್ಕದ್ದು.

೩ ಪ್ರತಿಯೊಂದು ಡಿಸ್ಟ್ರಿಕ್ಟಿನಿಂದಲೂ ಮೈಸೂರು, ಬೆಂಗಳೂರು ಪಟ್ಟಣಗಳಿಂದಲೂ ಇಬ್ಬಿಬ್ಬರನ್ನು ಆರಿಸಿಕೊಳ್ಳುವೆವು

೪ ಪ್ರತಿ ವಿದ್ಯಾರ್ಥಿಯೂ ಪ್ರಾರಂಭದಲ್ಲಿ ೫೦ ರೂಪಾಯಿಗಳನ್ನು ಕೂಡತಕ್ಕದ್ದು

—ಬೋಧಿಸುವ ಅಂಶಗಳು—

೧ ಡ್ರಾಯಿಂಗ್, ಪೆಯಿಂಟಿಂಗ್, ಸ್ಕೆಚ್ಚಿಂಗ್.

೨ ಬೋರ್ಡು ಬರೆಯುವದು, ಸ್ಕ್ರೀನುಗಳನ್ನು ಬರೆಯವುದು.

೩ ಮನೆಗಳಿಗೆ ಬಣ್ಣವನ್ನು ಹಾಕುವದು. ಮತ್ತು ಅಲಂಕಾರಮಾಡುವುದು.

೪ ಫೋಟೋ ತೆಗೆಯುವದು. ಎಂಲಾರ್ಜ್ ಮಾಡುವುದು

೫. ಹತ್ತಿಯನ್ನು ಸಿದ್ಧಮಾಡಿಕೊಂಡು ನೂಲುವುದು,

ಮುಂತಾದ ಇನ್ನೂ ಅನೇಕ ಕೈಕಸಬನ್ನೂ ಕಲಿಸಿಕೊಡುವೆವು.

ಎ. ಎಸ್. ಸುಬ್ಬರಾವ್
ಆರ್ಟಿಸ್ಟ್

ಸುಗಂಧ ದ್ರವ್ಯಗಳು

ನ್ನಲ್ಲಿ ಎಲ್ಲಾ ತರಹದ ಊದುಬತ್ತಿಗಳೂ, ಗಳೂ, ಪನ್ನೀರು, ರಾಯಲ್ ಸುಗಂಧಿ ಪ ಮುರಬ್ಬಾಗಳು, ಎಲ್ಲಾ ತರಹದ ಷಂ ಇವುಗಳೆಲ್ಲಾ ದೊರೆಯುತ್ತವೆ. ಖರೀದಿಯೂ, ಪದಾರ್ಥಗಳು ಸಂಬಿಕೆಯಾಗಿವೆ. ಅಪೇಕ್ಷಿಸುವವರು ತರಿಸಿಕೊಳ್ಳಬೇಕೆ. [22-5]

ಉಪಾಧ್ಯಾಯ ಎಂಡ್ ಸನ್ಸ್
ಸುಗಂಧಕಾರಿಗಳು, ಮೈಸೂರು

ಹೊಸಮಾದರಿಯ ಊದಬತ್ತಿಗಳು

ಉತ್ತಮವಾದ ಮೂಲಿಕೆಗಳಿಂದಲೂ ಅತ್ತರು ಮೊದಲಾದ ಸಾರಗಳಿಂದಲೂ ಒಡಗೂಡಿ ದೇವತಾ ಪೂಜ್ಯಕ್ಕೆ ಯೋಗ್ಯವಾದ 'ದಶಾಂಗಬತ್ತಿ' ಎಂಬುದಾಗಿ ಪ್ರಸಿದ್ಧಿಹೊಂದಿರುವ ಹೊಸರೀತಿಯ ಊದುಬತ್ತಿಗಳು ನಮ್ಮಲ್ಲಿ ತಯಾರಾಗಿ ಬಿಕರಿಗೆ ಸಿದ್ಧವಾಗಿವೆ ಕ್ಯ ಸೇರು ೧ ಕ್ಕ (ಸುಮಾರು ೬೦೦ ಬತ್ತಿಗಳು) ೩ ರೂಪಾಯಿ ಮಾತ್ರ. ಸರ್ವರೂ ತರಿಸಿ ತಮ್ಮಲಕ ನಮ್ಮ ಶ್ರಮವನ್ನು ಸಾರ್ಥಕಗೊಳಿಬೇಕಾಗಿ ಪ್ರಾರ್ಥನೆ. ನಮ್ಮಲ್ಲಿ ಇನ್ನೂ ಇತರ ವಿಧವಾದ ಹೆಬ್ಬಿನ ಬೆಲೆಯ ಅಂಬರ್ ಕಸ್ತೂರಿಬತ್ತಿಗಳೂ, ಗಂಧದಬಲ್ಲೆ ಅರಗಜ, ಪನ್ನೀರು ವಗೈರೆ ಸಹಾ ದೊರೆಯುತ್ತೆ

ಇದಲ್ಲದೆ ಸಂಜನಗೂಡಿನ ಮಿ|| ಬಿ.ಎ, ಪಂಡಿತರ ಲೋಕಪ್ರಸಿದ್ಧವಾದ ಸಿದ್ಧೌಷಧಗಳೂ, ಷರಬತ್ತುಗಳೂ, ತೈಲಗಳೂ, ಲೇಹ್ಯಗಳೂ ನಮ್ಮಲ್ಲಿ ಸಿಕ್ಕುತ್ತೆ.

ಸಿ. ಪದ್ಮಯ್ಯ, ಕಮರ್ಷಿಯಲ್ ಹಾಲ್,
ಸಂತೇಪೇಟೆ, ಮೈಸೂರು.

MYSORE GOVERNMENT LOAN BONDS & Shares of Prominent Companies

BOUGHT & SOLD

For particulars apply to:—

THE SEMAH ELISHA COMPANY

MYSORE.

ಮೈಸೂರು ಸರ್ಕಾರಿ ಸಾಲದ ಪತ್ರ
ಮತ್ತು ಕಂಪೆನಿ ಷೇರುಗಳನ್ನು
ಕೊಂಡುಕೊಳ್ಳುತ್ತೇವೆ
ಮತ್ತು
ಬಿಕರಿ ಮಾಡುತ್ತೇವೆ.

ಸೇಮಾ ಇಲೈಷಾ ಕಂಪೆನಿ ಮೈಸೂರು.

Never too late to mend

The past, present and future Dictator

The wonderful mechanism of man here txplained. Your future once more, why hat beginning, wherefore this rise and falle the what of the next DO CONSULT. This astrologer determines all about your life before the curtain drops. The all is the research study of that beginning, the inductive and unique advisory of the rise and fall in current life, the what in future. This is combined in the knowledge—mature of the birth-time, the Zodaic sign commanding the planets, the constellation of star that lights the right way of life's attainment. Opportunity solicited with a hearty offer of trial.- Beware others of this proclamation are little read in the agreement of life with its visible and invisible imbeded directors. Man in his pride of presumption has neglected to maintain his own life concurrently with the invisible and visible agencies, hence, the frustrations of his attempts to success. Success is only gained by man, the man that knows equally of the visible impediments which he wards easily and the invisible which he tries to attain but neglects. Fail not, neglect not and attain your wishes as the free-will man. The win's influences are imbeded in time The doctor advises only to the outer agreement but the honest way is lacking to explain the why of the failure. The astrologer alone can explain this in its detail and win you the life's battle as easy as the doctor's medicine, which proclaims to relieve. This foreword might appeal and lead you to our Astralogical Bureau, where your all-care is explained to heart's content. The heart is the seat of divinity. the divine-wisdom-ice is broken to your swallowing adversities by bits.

Apply for the yearly, monthly, weekly, and daily predictions; particulars on enquiry

Bidare Nanjundasastry and Brother
Astrologers, PARIMALA VILAS
Mysore

"ಸತ್ಯವಾದಿ"

೭ನೆ ಜುಲೈ ೧೯೨೫

ದಿವಂಗತ ಮಿ॥ ಜಸ್ಟಿಸ್ ಕೆ. ರಾಮು ಸ್ವಾಮಯ್ಯಂಗಾರ್ಯರು

ಈ ಮಿಥ್ಯಾ ಪ್ರಪಂಚದಲ್ಲಿ ಯಾವುದೂ ಸ್ಥಿರವಲ್ಲ. ಆದಾಗ್ಯೂ ಬಹ್ಮಸೃಷ್ಟಿಯಲ್ಲಿ ಪ್ರತಿಕ್ಷಣದಲ್ಲಿಯೂ ಅಸಂಖ್ಯಾಕವಾಗಿ ಜೀವರಾಶಿಗಳುದ್ಭವಿಸುತ್ತಲೂ ಮತ್ತು ಸಾಯುತ್ತಲೂ ಇವೆ. ಈ ಜೀವರಾಶಿಗಳಲ್ಲಿ ಮನುಷ್ಯ ಜನ್ಮವು ಶ್ರೇಷ್ಠವಾದುದು. ಮಿಕ್ಕವೆಲ್ಲವೂ ಈ ಮನುಷ್ಯಾಧೀನ. ಪೂರ್ವಪುಣ್ಯ ಸುಕೃತಫಲದಿಂದಲ್ಲದೆ ಮಾನಷ ಜನ್ಮ ದೊರೆಯವುದಿಲ್ಲ. ಹಾಗೂ ಜನ್ಮವೆತ್ತಿದ ಮೇಲೆ ಸಾರ್ಥಕಗೊಳಿಸಬೇಕು. ಹಾಗಿಲ್ಲದಿದ್ದರೆ ಆ ಜನ್ಮವು ವ್ಯರ್ಥವೇ ಸರಿ. ಈ ತತ್ವವನ್ನು ದಿವಂಗತ ಜಸ್ಟಿಸ್ ಕೆ. ರಾಮಸ್ವಾಮೈಯ್ಯಂಗಾರ್ಯರು ತಮ್ಮ ಈ ಅಲ್ಪಾಯುಸ್ಸಾದ ೪೮ ವರ್ಷ ವಯಸ್ಸಿನಲ್ಲಿಯೇ ಸ್ಥಿರಪಡಿಸಿದರು.

ದಿವಂಗತ ಜಸ್ಟಿಸ್ ಕೆ ರಾಮಸ್ವಾಮೈಯ್ಯಂಗಾರ್ಯರು ಸಾಮಾನ್ಯ ವಂಶದಲ್ಲಿ ಜನಿಸಿ ಬಾಲ್ಯದಿಂದಲೂ ಸ್ವಬುದ್ಧಿ ಶಕ್ತಿಯಿಂದ ವಿದ್ಯಾವ್ಯಾಸಂಗ ಮಾಡುತ್ತಾ ಮದ್ರಾಸು ಯೂನಿವರ್ಸಿಟಿ ಬಿ. ಎ. ಬಿ. ಎಲ್ ಪರೀಕ್ಷೆಗಳಲ್ಲಿ ತೇರ್ಗಡೆಹೊಂದಿ ಬೆಂಗಳೂರಲ್ಲಿ ಸಿಂತು ನ್ಯಾಯಸ್ಥಾನಗಳಲ್ಲಿ ಕಕ್ಷಿಗಾರರಪರವಾಗಿ ವಾದಿಸಲು ಪ್ರಾರಂಭಿಸಿದರು. ಇವರು ಸಾಧು ಸ್ವಭಾವವುಳ್ಳವರಾಗಿ, ಸರ್ವರ ಪ್ರೀತಿಗೆ ಪಾತ್ರರಾಗಿದ್ದರು ಇವರ ನೈಜಗುಣವೂ ಕಾನೂನುಗಳಲ್ಲಿನ ನೈಪುಣ್ಯವೂ ನಿರ್ಮಲ ಚಿತ್ತವೂ ಮತ್ತು ಎಲ್ಲಕ್ಕಿಂತ ಮೇಲಾದ ಸಾಧುಗುಣವೂ ಎಲ್ಲವೂಶೇರಿ ಇವರನ್ನು ಮೋಹಮೂರ್ತಿಯನ್ನಾಗಿ ಮಾಡಿ ಕಕ್ಷಿಗಾರರು ದುಂಬಿಗಳೋಪಾದಿಯಲ್ಲಿ ಇವರಲ್ಲಿ ಮರೆಹೊಕ್ಕಲು ಅವಕಾಶವನ್ನುಂಟು ಮಾಡಿದವು. ತಮಗೆವಿರಾಮವಿಲ್ಲದಂತಾದಾಗ್ಯೂ ಪ್ರತಿಯೊಬ್ಬನ ಕಷ್ಟಗಳನ್ನು ವಿಚಾರಿಸುತ್ತಾ ತದನುಸಾರವಾದ ನಿವಾರಣ ಮಾರ್ಗವನ್ನು ಪದೇಶಿಸುತ್ತಾ ಇರುತ್ತಿದ್ದರು, ಕೆಲವು ಕಾಲದಲ್ಲಿ ಇವರ ಹೆಸರು ನ್ಯಾಯ ವಿಮರ್ಶೆಯಲ್ಲಿ ಅಗ್ರಗಣ್ಯರೆಂದು ಖ್ಯಾತಿಗೆ ಬಂದು ನಮ್ಮ ಖಾವಂದರ ಕಿವಿ ಮುಟ್ಟಿ ಇವರಿಗೆ ಸರಕಾರಿ ನೌಕರಿ ದೊರೆಯಲು ಅವಕಾಶವಾಗಿ ಸಬಾರ್ಡಿನೇಟ್ ಜಡ್ಜಿ ಎಂಬ ಜವಾಬುದಾರಿ ಹುದ್ದೆಯು ೧೯೧೮ರಲ್ಲಿ ದೊರೆಯಿತು. ನಮ್ಮ ಖಾವಂದರವರ ಆಜ್ಞೆಯನ್ನು ಶಿರಸಾ ಧರಿಸಿ ಆ ಪದವಿಯನ್ನಲಂಕರಿಸಿ ಅಂದಿನಿಂದ ನ್ಯಾಯತೀರ್ಪಿನಲ್ಲಿ ತಮ್ಮ ಕುಶಲತೆಯನ್ನು ದಿನೇದಿನೆ ಶುಕ್ಲಪಕ್ಷ ಚಂದ್ರನಂತೆ ತೋರಿಸುತ್ತಾ ಬರುತಿದ್ದರು. ನ್ಯಾಯತೀರ್ಪಿನಲ್ಲಿ ನಿಷ್ಪಕ್ಷಪಾತದಿಂದ ನಿರ್ಭಯರಾಗಿದ್ದ ಈ ಮಹನೀಯರಿಗೆ ಉತ್ತಮೋತ್ತಮ ಪದವಿಯು ಅವಕಾಶ ಬಿದ್ದಂತೆ ಲಭಿಸಿ ೭ ವರುಷಗಳಲ್ಲಿ ನಮ್ಮ ಘನ ಚೀಫ್ ಕೋರ್ಟಿನಲ್ಲಿ ೨ನೆಯ ಜಡ್ಜಿ ಪದವಿಗೆ ಬಂದು ಬೇಗನೆ ಚೀಫ್ ಜಡ್ಜಿಯಾಗುವ ಸಂಭವವೂ ಇದ್ದಿತು. ಇಷ್ಟುಸ್ವಲ್ಪ ಕಾಲದಲ್ಲಿ ಈ ಉನ್ನತ ಪದವಿಗೆ ಬಂದಾಗ್ಯೂ ತಮ್ಮ ಜನ್ಮಥಾ ಬಂದ ಸಾಧುಸ್ವಭಾವವು ಹೋಗದೆ ಮಕ್ಕಳೋಪಾದಿಯಲ್ಲಿ ಎಲ್ಲರಲ್ಲಿಯೂ ಏಕರೀತಿಯಲ್ಲಿರುವರು. ನಮ್ಮ ಘನ ಚೀಫ್ ಜಡ್ಜಿಯವರಿಗೆ ಇವರಲ್ಲಿ ಪರಮ ವಿಶ್ವಾಸ ಎತ್ತೆಂಬುದು ಅವರ ಭಾಷಣದಿಂದಲೇ ವಿಶದವಾಗುತ್ತೆ ಅವರು ಹೇಳಿದುದೇನಂದರೆ 'ದೈವವು ಈ ಮಹನೀಯರನ್ನು ಇನ್ನು ಕೆಲವು ಕಾಲ ಜೀವಂತವಾಗಿಟ್ಟಿದ್ದ ಪಕ್ಷದಲ್ಲಿ ಈ ಚೀಫ್ ಕೋರ್ಟಿಗೆ ಇವರಂತಹ ಜಡ್ಜಿಯು ದೊರೆಯುತ್ತಿರಲಿಲ್ಲ. ಇವರ ಮರಣದಿಂದ ಮೈಸೂರು ದೇಶಕ್ಕೆ ನಷ್ಟ ಉಂಟಾಗಿರುತ್ತೆ' ಎಂದು ಅಭಿಪ್ರಾಯಪಟ್ಟಿರುವುದು ಅತಿಶಯೋಕ್ತಿಯಾಗಲಾರದು. ಈ ಮಹನೀಯರು ಬಹಳ ಸುಕೃತಶಾಲಿಗಳು. ಆದುದರಿಂದಲೇ ಇಂತಹ ಸುನಾಯಾಸ ಮರಣವು ಇವರಿಗೆ ಲಭಿಸಿತು. ಇವರು ಹೋದ ಶನಿವಾರ ಅಂದರೆ ೪ನೇ ತಾರೀಖು ತಮ್ಮ ಕಾರ್ಯವನ್ನು ಪೂರೈಸಿಕೊಂಡು ಗಾಳಿ ಹವಾ ತೆಗೆದುಕೊಂಡು ಮನೆಗೆ ಬಂದು ಸೇರಿದರು. ನಂತರ ತಮ್ಮ ಮಕ್ಕಳೊಂದಿಗೆ ಮಕ್ಕಳೋಪಾದಿಯಲ್ಲಿ ಆಡುತ್ತಿರುವಾಗ ಹಾಗೆಯೇ ದೈವವು ತನ್ನ ಲೀಲೆಯನ್ನು ತೋರಿಸುವಂತೆ ಪ್ರಾಣವು ಇವರ ದೇಹವನ್ನು ಬಿಟ್ಟು ಹೊರಟುಹೋಯಿತು. ಇವರ ಪತ್ನೀಪುತ್ರರನ್ನು ಸಹ ಕಂಡು ಮಾತನಾಡಲು ಅವಕಾಶವಿಲ್ಲದಂತೆ ಆದದ್ದು ಬಹು ವಿಷಾದಕರವಾಗಿರುತ್ತೆ.

ಈ ವಿಷಾದಕರವಾದ ಇವರ ಮರಣವಾರ್ತೆಯು ಕಾಡಗಿಚ್ಚಿನಂತೆ ಎಲ್ಲೆಲ್ಲಿಯೂ ಹರಡಿ, ಎಲ್ಲರ ಮನಸ್ಸಿನಲ್ಲಿಯೂ ಕಳವಳವನ್ನುಂಟುಮಾಡಿತು. ಮರುದಿನ ಬೆಳಿಗ್ಗೆ ಇವರ ಮುಖಸಂದರ್ಶನಕ್ಕಾಗಿ ಸರ್ಕಾರಿ ಹದ್ದೇದಾರರೂ ಇತರ ಖಾಸಗೀ ದೊಡ್ಡ ಮನುಷ್ಯರೂ ತಂಡೋಪತಂಡವಾಗಿ ಹೋಗಿಬರುತ್ತಿದ್ದದ್ದೇ ಈ ಮಹನೀಯರು ಎಂತಹ ಸದ್ಗುಣಶಾಲಿಗಳೆಂಬುದು ವಿಶದಪಡಿಸುತ್ತದೆ.

ಇಂತಹ ನಿಸ್ಪೃಕ್ಷಪಾತವುಳ್ಳ ಮತ್ತು ನ್ಯಾಯತೀರ್ಪಿನಲ್ಲಿ ಅಗ್ರಗಣ್ಯರಾದ ಜಡ್ಜಿಯು ದೊರೆಯುವೆದು ಸುಲಭಸಾಧ್ಯವಲ್ಲವೆಂದು ಏಕವಾಕ್ಯದಿಂದ ಎಲ್ಲರೂ ಅಭಿಪ್ರಾಯಪಡುತ್ತಿರುವುದು ನಮ್ಮ ಸಂಸಾನಕ್ಕೆ ಒಂದು ಹೆಮ್ಮೆ. ಇಂತಹವರನ್ನು ಕಳೆದುಕೊಂಡುದು ಬಹು ದುರ್ದೆಶೆಯೆಂದೇ ಭಾವಿಸಬೇಕಾಗಿರುತ್ತದೆ. ಸತ್ಪುರುಷರು ದೀರ್ಘಾಯುಗಳಲ್ಲ ವೆಂಬುದು ಈ ಮಹನೀಯರ ಅಕಾಲ ಮರಣವೇ ಸಾದೃಶ್ಯವಾಗಿರುವದು

ನಮ್ಮ ಸಂಸ್ಥಾನಕ್ಕೆ ಇವರ ಮರಣವು ವ್ಯಸನವನ್ನೂ ನಷ್ಟವನ್ನೂ ಉಂಟುಮಾಡಿರುವಾಗ ಇವರ ಪತ್ನೀಪುತ್ರರಿಗೂ ಬಂಧುಬಳಗದವರಿಗಿನ್ನಿಷ್ಟು ವ್ಯಸನಕರವಾಗಿರುವುದೋ ಹೇಳಲಸಾಧ್ಯ. ದೈವಕಾರ್ಯಕ್ಕೆ ಆರು ಎದುರುಂಟು ಆದದ್ದು ಅನುಭವಿಸಿಯೇ ತೀರಬೇಕು. ಆದುದರಿಂದ ಈ ವ್ಯಸನವನ್ನು ಇವರ ಪತ್ನೀಪುತ್ರರು ಧೈರ್ಯದಿಂದ ಸಹಿಸಿ ಇವರ ಆತ್ಮಕ್ಕೆ ಶಾಂತಿ ಉಂಟಾಗಲು ದೇವರನ್ನು ಧ್ಯಾನಿಸಬೇಕೆಂದು ಕೋರಿ ನಾವೂ ಅದೇ ರೀತಿ ದೇವರನ್ನು ಪ್ರಾರ್ಥಿಸುವೆವು. ಸರ್ವರೊಂದಿಗೆ ನಮ್ಮ ವ್ಯಸನವನ್ನೂ ಇವರ ಪತ್ನೀಪುತ್ರರಿಗೆ ಈ ವಿಷಯ ಬಹು ವಿಷಾದದಿಂದ ಅರ್ಪಿಸುವೆವು

ಈ ಮಹನೀಯರು ದೈವಾಧೀನರಾದ ನಿಮಿತ್ತ ಉಂಟಾದ ಶೋಕಪ್ರದರ್ಶನಕ್ಕಾಗಿ ಸಂಸ್ಥಾನಾದ್ಯಂತ ಎಲ್ಲಾ ಕೋರ್ಟುಗಳೂ ಮುಚ್ಚಲ್ಪಟ್ಟಿದ್ದವು.

ಲಂಚ ಪ್ರಪಂಚ.

ಕೂತರೆ ಲಂಚ, ನಿಂತರೆ ಲಂಚ, ಮಲಗಿದರೆ ಲಂಚ ಮಾತಾಡಿದರೆ ಲಂಚ, ಮಾತಾಡದೆ ಇದ್ದರೆ ಲಂಚ, ಮಂಚ ಏರುವುದಕ್ಕೆ ಲಂಚ, ಇಳಿಯುವುದಕ್ಕೆ ಲಂಚ, ಆ ಅಂದರೆ ಲಂಚ, ಊ ಅಂದರೆ ಲಂಚ, ಲಾಯರಿಗೆ ಲಂಚ, ಲಾಯರ ಗುಮಾಸ್ತೆಗೆ ಲಂಚ, ಲಾಯರಿಗೂ ವಕೀಲರಿಗೂ ಮಧ್ಯೆ ಮಧ್ಯಸ್ತಗಾರನಿಗೂ ಲಂಚ, ರೆವಿನ್ಯೂ ಕೋರ್ಟಿಗೂ ಲಂಚ, ಕ್ರಿಮಿನಲ್ ಕೋರ್ಟಿಗೂ ಲಂಚ, ಸಿವಿಲ್ ಕೋರ್ಟಿನಲ್ಲಿ ಕೂತರೆ ಲಂಚ, ಮಾತಾಡಿದರೆ ಲಂಚ, ಲಂಚವೆಲಾ ಕೋರ್ಟು ಫೀಜು ಹಿಂದೂ ಲಂಚ, ಮುಂದೆಯೂ ಲಂಚ, ಎದುರಿಗೂ ಲಂಚ, ಮೇಲೂ ಲಂಚ, ಕೆಳಗೂ ಲಂಚ, ತಾಲೂಕಿಗೂ ಲಂಚ, ಹೋಬಳಿಗೂ ಲಂಚ, ಡಿಸ್ಟ್ರಿಕ್ಟಿಗೂ ಲಂಚ, ಅದರ ಮೇಲೂ ಲಂಚ, ಲಂಚವೆಲ್ಲಾ ಗಿಂಚು, ಕಂಡರೆ ಸುಂಕ, ಕಾಣದಿದ್ದರೆ ಭಿಂಕ, ಸೂಳೆಗೂ ಲಂಚ ಗರ್ತಿಗೂ ಲಂಚ, ಜವಾನನಿಗೂ ಲಂಚ, ಲಂಚ, ಯಾವಕಾರ್ಯಕ್ಕೂ ಲಂಚ, ಕೈ ಮುಟ್ಟಿ ಕೊಟ್ಟರೆ ಲಂಚ, ಕೈ ಬಿಟ್ಟು ಕೊಟ್ಟರೆ ಇನಾಮು, ಭಂಡೀ ಬಿಟ್ಟೀಗೆ ಲಂಚ, ಸೌದೆ ಭಂಡೀಗೂ ಲಂಚ, ರೈಲು ಭಂಡೀ ಲಂಚದ ಮೊಟ್ಟೆ, ಗಾರ್ಡುಗಳಿಗೂ ಲಂಚ, ಮಾಸ್ಟರುಗಳಿಗೂ ಲಂಚ, ಮೂಟೆ ಹಾಕಿದರೆ ಲಂಚ ತೆಗದರೆ ಲಂಚ, ಟಿಕೇಟಿಗೆ ಲಂಚ ಬುಕ್ಕಿಟ್ಟಿಗೆ ಲಂಚ, ಶ್ಯಾನುಭೋಗನಿಗೆ ಲಂಚ, ಗೌಡನಿಗೆ ಲಂಚ, ಸೇಕದಾರನಿಗೆ ಲಂಚ, ಸುಬೇದಾರನಿಗೆ ಲಂಚ, ಹಿಂದುಸ್ಥಾನದಲ್ಲಿಯೂ ಲಂಚ, ವಿಲಾಯತಿನಲ್ಲಿಯೂ ಲಂಚ, ಯುರೋಪಿನಲ್ಲಿಯೂ ಲಂಚ, ಎಲ್ಲೆಲ್ಲಿಯೂ ಲಂಚಮಯ ಲೋಕವೆಲ್ಲಾ ಲಂಚ, ಪ್ರಪಂಚವೆಲ್ಲಾ ಲಂಚ, ಲಂಚವೆಂದರೆ ಲಂಚ, ಲಂಚವೆಂದರೆ ದುಡ್ಡು ಕೊಟ್ಟರೆ ಮಾತ್ರ ಲಂಚವೆನ್ನ ಬೇಡಿ, ಹಣ್ಣುಹಂಪಲು ಹೂವು ಕೊಟ್ಟರೂ ಮನುಷ್ಯನನ್ನು ಗೆಲ್ಲಬಹುದು ಲಂಚಮಯಪ್ರಪಂಚ

—ಬಂಗಾಳಾ ಸ್ವರಾಜ್ಯ ಪಾರ್ಟಿಗೂ ಪ್ರಾಂತೀಯ ಕಾಂಗ್ರೆಸ್ ಕಮಿಟಿಗೂ ಮಿ॥ ಸಿ. ಆರ್ ಗುಪ್ತರು ಅಧ್ಯಕ್ಷರಾಗಿ ನಿಯಮಿಸಲ್ಪಟ್ಟಿದ್ದಾರೆ.

—ಇಂಡಿಯಾ ಚರ್ಚವರ್ತಿಯವರು ಇಂಡಿಯಾ ಸ್ಟೇಟ್ ಸೆಕ್ರೆಟರಿಯವರೊಂದಿಗೆ ಶೀಘ್ರದಲ್ಲಿ ಇಂಡಿಯಾ ದೇಶಕ್ಕೆ ಬರುವವರಾಗಿರುತ್ತಾರೆ

—ಈಗ ತಾನೇ ಚೀಫ್ ಕೋರ್ಟಿನಿಂದ ಮಿ॥ ಜಸ್ಟಿಸ್ ಸಬ್ಬಣ್ಣನವರು ಪುನಃ ಕೆಲಸಕ್ಕೆ ಪ್ರಾರಂಭಿಸಿರುವದಾಗಿ ತಿಳಿಯಲ್ಪಟ್ಟಿದೆ

—ನಮ್ಮ ದಿವಾನರನ್ನು ಪಾಟ್ನಾ ಸ್ಟೇಷನ್ನಿನಲ್ಲಿ ಎಂಬಾತನೊಬ್ಬ ದುಷ್ಟಮಾತುಗಳಿಂದ ಅವಮಾನಕ್ಕಾಗಿ ಅವರು ಆತನಿಗೆ ನೋಟೀಸು ವಿಷಯವನ್ನು ಹಿಂದೆಯೇ ಪ್ರಕಟಿಸಿದ್ದೆವು ಆತನು ಕ್ಷಮಾಪಣೆಬೇಡಿ, ೫೦೦ ರೂ ಕಳುಹಿಸಿಕೊಟ್ಟನೆಂದೂ, ಅದರಲ್ಲಿ ದಯಾಳತ್ವಕ್ಕನುಗುಣವಾಗಿ, ೨೫೦ ನ್ನು ಅವನಿಗೆ ವಾಪಸ್ಸುಮಾಡಿ, ಸೆಲೆಪರ್ ಸಂಘಕ್ಕೆ ಧರ್ಮಾರ್ಥ ಸಿರುವದಾಗಿ ವರ್ತಮಾನ ಬ್ರ

ಪತ್ರ ಸಂವೇದ.

ಬಾತ್ಮಿದಾರರ ಪಡುವ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲ.

ರೇಟ್ ಪೇಯರುಗಳ ಗೋಳು.

—೦—

ಸ್ವಾಮಿ ! ನಮ್ಮ ಮುನಿಸಿಪಾಲಿಟಿಯು ಇತ್ತೀಚೆಗೆ ಮಾದರಿ ಮುನಿಸಿಪಾಲಿಟಿಯಾಗುವ ಸಂಭವವಿರುವುದು ಸುಮ್ಮನಿದ್ದರೆ ಮಾದರಿ ಮುನಿಸಿಪಾಲಿಟಿಯಾಗುವುದೆ ? ಇದನ್ನು ತಿಳಿದೇ ನಮ್ಮ ಮುನಿಸಿಪಲ್ ಅಧಿಕಾರಿಗಳು ಹೊಸ ಏರ್ಪಾಡುಗಳನ್ನು ಮಾಡುತ್ತಿರುವರು. ಇಂತಹ ಹೊಸ ಏರ್ಪಾಡುಗಳಲ್ಲಿ ನೀರಿನ ಮೇಲೂ, ಮನೆಯ ಮೇಲೂ, ಮತ್ತು ದೀಪದ ಮೇಲೂ ಹೊಸದಾಗಿ ಹೆಚ್ಚಿಸಬೇಕೆಂದು ನಿರ್ಧರಿಸಿರುವ ಆ ಕಂದಾಯವಿನಿಯಲ್ಲಾ ಅದೂ ಒಂದು. ಮಾದರಿ ಸಂಸ್ಥಾನದ ಮಾದರಿ ಮುನಿಸಿಪಾಲಿಟಿಯ ಮಾದರಿ ಪ್ರತಿನಿಧಿಗಳು ಕಂದಾಯವನ್ನು ಹೆಚ್ಚಿಸಬೇಕೆಂದಭಿಪ್ರಾಯಪಟ್ಟಿರುವುದನ್ನು ಮಾದರಿ ಪ್ರಜೆಗಳು ತಿರಸ್ಕರಿಸುವರೆ ? ಇದನ್ನು ತಿಳಿದೇ ಈ ರೀತಿ ಮಾದರಿ ಕಂದಾಯ ! ಸ್ವಾಮಿ ! ನನ್ನಂತಹ ಬಡಬಗ್ಗರಿಗೆ ಈ " ಮಾದರಿ " ಬಿರುದೂ ಬೇಡ, ಆ ' ಮಾದರಿ ' ಕಂದಾಯವೂ ಬೇಡ. ಹಿಂದೆಯೇ ಇಲ್ಲಿನ ಕಂದಾಯವು ಬಹಳ ಹೆಚ್ಚಾಗಿದ್ದಿತು. ಅದನ್ನು ಮತ್ತೂ ಹೆಚ್ಚಿಸುವುದೆಂದರೆ ಬಡವರ ಹೊಟ್ಟೆಯ ಮೇಲೆ ಹೊಡೆಯುವುದೆಂದರ್ಥವಲ್ಲದೆ ಬೇರೆ ಅಲ್ಲ.

ಅದಂತಿರಲಿ. ಸ್ವಾಮಿ ! ಈ ನವೀನ ಕಂದಾಯಕ್ಕೆ ಆಗತ್ಯವಾದರೂ ಏನು ? ಎಲ್ಲೆಲ್ಲಿಯೂ ಹೊಸ ಕಾಮಗಾರಿ ನಡೆಯುತ್ತಿರುವುದಲ್ಲದೆ ಮುಗಿದಿಲ್ಲ. ನಮ್ಮ ಮಾರ್ಕೆಟ್ಟೇ ಇದಕ್ಕೆ ನಿದರ್ಶನ. ಈ ಮಾರ್ಕೆಟ್ ಕಟ್ಟುವುದಕ್ಕೆ ಪ್ರಾರಂಭವಾಗಿ ಎಷ್ಟು ಕಾಲವಾದರೂ ಕೆಲಸಮಾತ್ರ ಪೂರೈಸಿಲ್ಲ. ಇದು ಯಾವಾಗ ಮುಗಿಯುವುದೋ ದೇವರೇ ಬಲ್ಲ. ಅಷ್ಟುಮಾತ್ರವಲ್ಲದೆ ಇದಕ್ಕೆ ಇನ್ನೆಷ್ಟು ಖರ್ಚಾಗಬೇಕೋ ಹೇಳುವುದಕ್ಕೆ ಅಸಾಧ್ಯ.

ನಮ್ಮ ಪ್ರತಿನಿಧಿಗಳ ವಿಷಯವಾದರೋ ! ಇವರುಗಳು ಓಟ್ ಯಾಚನಕಾಲದಲ್ಲಿ ಪ್ರಜೆಗಳ ಕ್ಷೇಮಕ್ಕೆ ಹೋರಾಡುತ್ತೇವೆಂದು ಹೇಳಿದ್ದರು. ಆಗ ಹೇಳಿದುದು ಈಗ ಜ್ಞಾಪಕವಿರುವುದೇ ? ಈ ಪ್ರಜಾಹಿತಚಿಂತಕರಿಗೆ ಮುಂದಿನ ಮುನಿಸಿಪಲ್ ಚುನಾವಣೆಕಾಲದಲ್ಲಿಯಾದರೂ ಜ್ಞಾಪಕಕ್ಕೆ ಬರಬಹುದು ಸದ್ಯಕ್ಕೆ ರೇಟ್ ಪೇಯರುಗಳ ಗೋಳನ್ನು ವಿಚಾರಿಸಿ ಅವರ ಪಕ್ಷವಾಗಿ ಹೋರಾಡುವವರಾರು ? ಪ್ರತಿನಿಧಿಗಳು ಹೋರಾಡು ? ಅವರಿಗೆ ಆಗತ್ಯವೇನು ? ರೇಟ್ ಪೇಯರ್ರು ತಮ್ಮ ಪಕ್ಷವಾಗಿ ಹೋರಾಡಬೇಕು. ಇದೂ ೇ ? ಪ್ರತಿನಿಧಿಗಳು ನಮ್ಮ ಬಡವರ ಪಕ್ಷವಾಗಿ ರಾಡುವರೆಂದು ರೇಟ್ ಪೇಯರುಗಳು ಸಂಘಗ ಸ್ಥಾಪಿಸಿಲ್ಲ. ಇದರಿಂದ ಈಗ ಕಣ್ಣುಕಣ್ಣುಬಿಡ ಬಂದಿರುವುದು ಆಯ್ತಾ, ಸಂಪಾದಕರೇ ರೂ ನಮ್ಮ ಪ್ರತಿನಿಧಿಗಳಿಗೆ ಅವರ ಕರ್ತವ್ಯ ಘವಿರಾ ! ಮುಂದಿನ ಚುನಾವಣೆಗೆ ನಾವು ೀ ಬಡ ಮೆಂಬರುಗಳನ್ನು ಚುನಾಯಿಸು ಪೇಯರುಗಳ ಸಂಘಸ್ಥಾಪಿಸಿ ನಮ್ಮ ಳಿಕನ್ನು ತಕ್ಕಿಸಿಕೊಳ್ಳಲು ಏರ್ಪಡಿಸಿ ತಾನೇ ವರ್ಷವರ್ಧಂತಿಯ ದರ್ಬಾರಾಗಿ ವರ್ಯಾದೆ ದೊರೆಯಿತು. ಇನ್ನು ನವರಾತ್ರಿಯ ದರ್ಬಾರಿನ ಸಮಾಲೋಚನೆ ! ರೇಟ್ ಪೇಯರುಗಳು ತಾವು ವಾಸಮಾಡುವ ಬೀದಿಗಳಲ್ಲಿ ದೀಪವಿಲ್ಲದಿದ್ದರೂ ಪ್ರತಿದಿನವೂ ಎಡಹಿಬೀಳುತ್ತಾ, ಕಣ್ಮುಚ್ಚಕೊಂಡೇ ಕುಳಿತಿರುವಾಗ ವರ್ಷಕ್ಕೊಂದುಬಾರಿ ಬರುವ ಈ ಕಂದಾಯಕ್ಕೆ ಗಮನಕೊಡುವರೇಕೆ ?

ಇನ್ನು ದೇಶಾಭಿಮಾನಿಗಳ ನಡವಳಿಕೆಯಂತೂ ಹೇಳತೀರದು, ಒಂದು ಪಕ್ಷವು ಬ್ರಾಹ್ಮಣರನ್ನೂ, ಇನ್ನೊಂದು ಪಕ್ಷವು ಬ್ರಾಹ್ಮಣೇತರರನ್ನೂ ಹಳಿಯುತ್ತ, ಪೃತ್ತಪತ್ರಗಳಲ್ಲಿ ಉತ್ತರನ ಪೌರುಷವನ್ನು ಬಿತ್ತರಿಸಿಕೊಳ್ಳುತ್ತಿರುವುದು. ಪತ್ರಕರ್ತರೋ ? ಒಬ್ಬರಿಗೆ ಮತಪ್ರಚಾರಣ ಚಿಂತೆ, ಒಬ್ಬರಿಗೆ ವ್ಯಾಪಾರಪ್ರಕಟಣೆಯ ಚಿಂತೆ ! ಒಬ್ಬರಿಗೆ ಸರ್ಕಾರವನ್ನು ಹೊಗಳುವ ಉತ್ಸಾಹ | ಒಬ್ಬರಿಗೆ ಭಾಷಾಭಿಮಾನ ! ಒಬ್ಬರಿಗೆ ದುರಭಿಮಾನ ! ಸರ್ಕಾರವು ಜನಗಳ ಕ್ಷೇಮಚಿಂತನೆಯನ್ನು ಜನರಿಗೇ ವಹಿಸಿದೆ, ಜನಕಾದರೋ ಹೆಚ್ಚು ಕಂದಾಯ ಕಟ್ಟುವ ಧನಿಕರಿಗೆ ವಹಿಸಿರುವರು, ಅವರು ಕೌನ್ಸಿಲರಿಗೆ ವಹಿಸಿಕೊಟ್ಟಿರುವರು. ಅವರು ದೇವರಿಗೆ ಒಪ್ಪಿಸಿರುವರು. ಎಂದ ಮೇಲೆ ದೇವರು ಮಾಡಿಸಿದ್ದಾಗಬೇಕು, ದೇವರಿಗಂತೂ ' ಯಸ್ಯಾನುಗ್ರಹ ಮಿಚ್ಛಾಮಿತಸ್ಯೆತ್ಕಂಹರಾಮ್ಯಹಂ' ಎಂಬ ವಾಕ್ಯಿನಂತೆ ಎಲ್ಲರನ್ನೂ ದರಿದ್ರರನ್ನಾಗಿಮಾಡುವ ಇಷ್ಟವೇ ಇರಬಹುದು. ಅಂತೂ ನಾವೇನೋ ಹೆಚ್ಚು ಕಂದಾಯ ಕೊಡದೆ ತಪ್ಪಿಸಿಕೊಳ್ಳಲಾಗುವಂತಿಲ್ಲ.

ಮನೆ ಬಾಡಿಗೆಗಳು ಹೆಚ್ಚಿ ಕಂದಾಯವನ್ನೇರಿಸಲು ಕಾರಣವಾಯಿತಂತೆ ! ಕಂದಾಯ ಹೆಚ್ಚಿ ಬಾಡಿಗೆ ಹೆಚ್ಚುವುದೋ ? ಬಾಡಿಗೆ ಹೆಚ್ಚಿ ಕಂದಾಯ ಹೆಚ್ಚುವದೋ ? ಸುಂಕ ಹೆಚ್ಚಿ ಪದಾರ್ಥದ ಬೆಲೆ ಹೆಚ್ಚುವದೋ ? ಪದಾರ್ಥದ ಬೆಲೆ ಹೆಚ್ಚಿ ಸುಂಕ ಹೆಚ್ಚುವದೋ ? ತೆರಿಗೆಗಳು ಹೆಚ್ಚಿ ಕ್ಷಾಮ ಹೆಚ್ಚಿತೋ ? ಕ್ಷಾಮ ಹೆಚ್ಚಿ ತೆರಿಗೆಗಳು ಹೆಚ್ಚುವದೋ ? ಯಾರು ಬಲ್ಲರು. ರಾಜನೀತಿವಿಶಾರದರೂ, ತರ್ಕಶಾಸ್ತ್ರವಿಚಕ್ಷಣರೂ, ಲೋಕೋಪಕಾರಪಾರೀಣರೂ, ಧರ್ಮತೇಜಃಪೂಜರಂಜಿತರೂ, ಕಾರ್ಯಧುರಂಧರರೂ, ಆದವರೇ ಇತ್ಯರ್ಥ ಪಡಿಸಿಕೊಳ್ಳಬೇಕಾಗಿದೆ. ಮೈಸೂರೇ ಕೊಡಲು ಸಿದ್ಧವಾಗಿರುವಾಗ ಗೊಣಗಾಟದಿಂದಳಗುವದೇನು ? ಅದರಿಂದಾಗುವ ತಡೆಯೂದರೂ ಏನು ? ಈ ವೈರಾಗ್ಯವನ್ನರಿತಿದ್ದರೂ, ಅತ್ತಲ್ಲದೆ ನೆಮ್ಮದಿಯಿಲ್ಲದ್ದರಿಂದ ಅಳಬೇಕಾಯಿತು.

ಪೇಚಾಟದ ಪೆದ್ದಣ್ಣ

—ಕೂಚ್‌ಬಿಹಾರ್ ಮಹಾರಾಣಿಯು ತನ್ನ ಗಂಡನು ವ್ಯಭಿಚಾರಿಯಾಗಿ ತನ್ನನ್ನು ಕ್ರೂರತನದಿಂದ ಹಿಂಸಿಸುತ್ತಾನೆಂದೂ ತಮ್ಮ ಪವಿತ್ರವಾದ ವಿವಾಹವನ್ನು ರದ್ದುಮಾಡಬೇಕೆಂದೂ ಹೈಕೋರ್ಟಿಗೆ ತಂದಿದ್ದ ದಾವಾದಲ್ಲಿ ರಾಣಿಯವರಿಗೆ ಜಯವುಂಟಾಗಿದೆ. ಇವರ ಜೀವನಕ್ಕೆ ೪೦೦ ರೂಪಾಯಿ ಕೊಡುವುದಂತೆ!

—ನಾಗಪುರದ ವಿಶ್ವವಿದ್ಯಾಲಯಕ್ಕೆ ಸೇರಿರತಕ್ಕ ಪಾಠಶಾಲೆಗಳಲ್ಲಿ ಮಿಲಿಟರಿ ಶಿಕ್ಷಣವನ್ನು ಕೊಡುವಂತೆ ಮಾಡಬೇಕೆಂದು ಅಲ್ಲಿಯ ಕೌನ್ಸಿಲಿನಲ್ಲಿ ಠಾ|| ಮಾಂಜಿಯವರು ಒಂದು ಠರಾವು ತರುತ್ತಾರೆ.

ಕೊಳ್ಳುತ್ತೇವೆ. ದೊಡ್ಡವನುಷ್ಯರು ಬಡವರ ಪ್ರತಿನಿಧಿಗಳಾದಲ್ಲಿ ಹೊಸಕಂದಾಯಗಳೇ ಗತಿ ! ಈ ದೊಡ್ಡವ್ಯನುಷ್ಯರು ಚುನಾವಣೆ ಕಾಲದಲ್ಲಿ ವೋಟು ಕೇಳಲು ಮನೆಮನೆಗೆ ಅಲೆದಾಡಿದಾಗ ಮೋಟಾರ್ ಕಾರಿಗೆ ಪೆಟ್ರೋಲ್ ಬಗ್ಗೆ ಖರ್ಚುಮಾಡಿದ ಹಣವನ್ನು ಬಡವರ ಪರವಾಗಿ ಮುನಿಸಿಪಾಲಿಟಿಗೆ ಕೊಟ್ಟಿದ್ದರೆ ಈಗ ಈ ಕಂದಾಯ ಹಾಕಬೇಕಾಗಿರಲಿಲ್ಲ. ಪ್ರತಿನಿಧಿಗಳೇ, ದಯವಿಟ್ಟು ಕಂದಾಯಹಾಕದಂತೆ ಮಾಡಿರಿ, ಘನ ಸರ್ಕಾರವೇ, ದಯಾಳುವಾದ ನಮ್ಮ ಮಹಾರಾಜರೇ ನೀವಾದರೂ ಈ ಹೆಚ್ಚು ಕಂದಾಯಕ್ಕೆ ಅಸ್ಪದಕೊಡದೆ ಬಡವರನ್ನುದ್ಧರಿಸಿರಿ. ಒಬ್ಬ ರೇಟ್‌ಪೇಯರ್

ನ್ಯಾಯಸ್ಥಾನವು ಅಖಾಡವೇ ?

ಕಳೆದ ಗುರುವಾರ ಶ್ರೀರಂಗಪಟ್ಟಣದಮುನ್ಸಿಫ್ ಕೋರ್ಟಿನಲ್ಲಿ ಇಬ್ಬರು ಗವಾಸ್ತರುಗಳು ಯಥೇಚ್ಛವಾಗಿ ವಾಕ್ ಯುದ್ಧ ಮಾಡಿ ತೃಪ್ತಿ ಹೊಂದದೆ ಕೊನೆಗೆ ಒಬ್ಬರನ್ನೊಬ್ಬರು ಹೊಡದುಕೊಳ್ಳಲಾರಂಭಿಸಿದರು. ಆ ಇಬ್ಬರಲ್ಲೊಬ್ಬರಿಗೆ ಸ್ವಲ್ಪ ಹೆಚ್ಚು ಏಟು ಬಿದ್ದು ಮುಖವು ಊದಿ ಹೋಗಿದೆಯಲ್ಲದೆ ಅವರ ಜುಟ್ಟು ಸಹ ಕಿತ್ತು ಹೋಯಿತು. ಒಂದೇ ಆಫೀಸಿನಲ್ಲಿ ಕೆಲಸ ಮಾಡತಕ್ಕ ಈ ಗುಮಾಸ್ತೆಯರು ಜಡ್ಜಿಯವರೂ ಹೆಡ್ಮುಕ್ತಿಯವರೂ ಇಲ್ಲದಿದ್ದಾಗ (ಜಡ್ಜಿಯವರು ಮೈಲ್ ಗಾಡಿಗೆ ಬಂದರು ; ಹೆಡ್ ಮುಕ್ತಿಯವರು ಊರೊಳಕ್ಕೆ ಹೋಗಿದ್ದರು) ಒಬ್ಬರಮೇಲೊಬ್ಬರು ಬಿದ್ದು ಕೈ ಮಾಡಿದುದೂ, ನ್ಯಾಯಸ್ಥಾನವನ್ನು ಅಖಾಡಕ್ಕೆ ಸರಿಮಾಡಿ ಕೋಳಿಗಳಂತೆ ಕಾದಾಡಿದುದೂ ತುಂಬಾ ಹೇಯವಾದ ವಿಷಯವೇ ಸರಿ. ಇದನ್ನು ನೋಡಿದರೆ ಈ ಜನರು ನ್ಯಾಯಸ್ಥಾನದ ನೌಕರಿಯೋಗ್ಯರೇ ಎಂಬ ಸಂಶಯವುಂಟಾಗುತ್ತದೆ. ಈ ವಿಷಯವಂತಿರಲಿ. ಸದ್ಯ ಅಲ್ಲಿನ ಮುಖ್ಯ ಅಧಿಕಾರಿಗಳು ಈ ಕಾದಾಟದ ಮುಖ್ಯ ಕಾರಣಗಳನ್ನು ಆಮೂಲಾಗ್ರವಾಗಿ ವಿಚಾರಿಸಿ, ಪತ್ತೆಮಾಡಿ, ತಪ್ಪಿತಸ್ಥರಿಗೆ ತಕ್ಕ ಶಿಕ್ಷೆಯನ್ನು ವಿಧಿಸಿ ಇನ್ನು ಎಂದಾದರೂ ಇಂಥ ಶೋಚನೀಯವಾದ ಸಂಗತಿಗಳು ಸಂಭವಿಸದಂತೆ ಮಾಡುವರೆಂದು ನಂಬಲ್ಪಟ್ಟಿದೆ.

ಶ್ರೀರಂಗನಾಥವಾಸ.

ಮನೆಗಳ ಕಂದಾಯ.

ರಾಜಧಾನಿಯಲ್ಲಿ ಮನೆಗಳ ಕಂದಾಯವನ್ನು ಹೆಚ್ಚಿಸಲು ನಿರ್ಣಯವಾಗಿಹೋಗಿದೆ. ಕಲೆಕ್ಟರ್ ಪ್ರುವಷ್ಟು ಬಾಡಿಗೆ ಒಂದೊಂದು ಮನೆಗೂ ಅರ್ಜಿಯಾಗಿ ಅದರ ಮೇಲೆ ಕಂದಾಯವಿಷ್ಟೇ ಇರಬೇಕೆಂದು ನಿಗದಿಯಾಗುತ್ತಲಿದೆ. ಈ ಅರ್ಥದಲ್ಲಿ ಪ್ರತಿಮನೆಯ ವಾಲೀಕನಿಗೂ ನೋಟೀಸನ್ನು ಹಂಚಲಾಗುತ್ತಿದೆ. ಒಂದು ಮನೆಯಾಯಿತು, ಒಂದು ಬೀದಿಯಾಯಿತು, ಒಂದು ವೊಹಲ್ಲೆಯಾಯಿತು, ಕಡೆಗೆ ಪಟ್ಟಣವೆಲ್ಲ ಹಂಚಿ ಆಯಿತು. ಎಲ್ಲೆಲ್ಲಿಯೂ ಜನಗಳ ಗೊಣಗಾಟ. ಯಾರೂ ಮುಂದರಿಯರು. ಯಾರಿಗೂ ಪರಿಹಾರೋಪಾಯ ತಿಳಿಯದು. ಯಾರಿಗೂ ಕೊಡಲು ಶಕ್ತಿಯಿಲ್ಲ. ಕೋಮುವಾರು ಪ್ರಾತಿನಿಧ್ಯವನ್ನು ಪಡೆದು ಕಲ್ಪರಾದ ಮುನಿಸಿಪಲ್ ಕೌನ್ಸಿಲರಿಗಂತೂ

Mysore Goyernment Aduertisements.

ಮೈಸೂರು ರೈಲ್ವೆಗಳು

— ಪ್ರಸಿದ್ಧ ಪತ್ರಿಕೆ

ಮೈಸೂರು ರೈಲ್ವೆ ವರ್ಕ್‌ಷಾಪುಗಳಲ್ಲಿ ಮೌಲ್ಡರುಗಳೂ, ಬಾಯಿಲರ್ ಮೇಕರುಗಳೂ, ಇ೬ಜಿ೬ ಫಿಟರುಗಳೂ, ಮತ್ತು ರಿವಿಟರುಗಳೂ ಕೆಲಸಕ್ಕೆ ಬೇಕಾಗಿದೆ.

ಇಂಡಿಯನ್ ರೈಲ್ವೆ ವರ್ಕ್‌ಷಾಪುಗಳ ಸಂಪೂರ್ಣಾನುಭವವುಳ್ಳ ಜನರು ಮಾತ್ರವೇ ಸದರಿ ಕೆಲಸಗಳಿಗಾಗಿ—

ಲೋಕೋ ಮತ್ತು ಕ್ಯಾರಿಯೇಜ್
ಸೂಪರ್‌ಟೆಂಡೆಂಟ್
ಮೈಸೂರು ರೈಲ್ವೆಗಳು
ಮೈ ಸೂ ರು.

ಎಂಬ ವಿಳಾಸಕ್ಕೆ ಅರ್ಜಿಯನ್ನು ಬರೆದುಕೊಳ್ಳಬಹುದಾಗಿದೆ.

TO LET

to

Permanent Advertisers

To Popularise your Business
in the Karnataka Provinces
YOU MUST ADVERTISE IN
the "SATYAVADI"
BECAUSE

It is the cheapest and mostup-to-date Karnatic Weekly
It is read largely and widely
Itis circulated among all grades of persons
It offers a profitable medium for advertising

Advertisement in this Paper is a good investment

Registered for Government Advertisements

Your Advertisement is Solicited

RATES of ADVERTISEMENTS

	1 clm	½ clm	¼ clm	1 inch
1 year	Rs 100	55	30	12
6 months	55	30	17	7
3 months	30	17	9	4
1 month	11	6	4	1-8-0
1 insertion	3	2	1-4-0	0-8-0

Advertisement charges are strictly payable in advance. One column mea sures about 13"×2⅓". 3columns to a page. Voucher copy supplied free.

All communications & remittances to be addressed to
The Manager,
SATYAVADI Office,
Mysore, S. India.

ಇಂಡಿಯಾ ಪ್ರಾವಿಡೆಂಟ್ ಕಂಪೆನಿ, ಲಿಮಿಟೆಡ್ 8-5

ಸುಪ್ರಸಿದ್ಧವಾದ ಈ ಕಂಪೆನಿಯು ಕಲ್ಕತ್ತಾದಲ್ಲಿ 1910 ರಲ್ಲಿ ಸ್ಥಾಪಿತವಾದುದು. ಕಂಪೆನಿಯ ಭದ್ರತೆಗೆ ಸರ್ಕಾರದಲ್ಲಿ ಹಣ ಡಿಪಾಜಿಟ್ ಮಾಡಿರುತ್ತೆ. ತಿಂಗಳಿಗೆ 1 ರೂಪಾಯಿಯ 8 ಆಣೆ ಪ್ರಕಾರ ರೂ 500, ರೂ 250 ಗಳಿಗೆ ಪುರುಷರಿಗೂ ಸ್ತ್ರೀಯರಿಗೂ, ವೈದ್ಯಪರೀಕ್ಷೆ ಇಲ್ಲದೆ, ವಯಸ್ಸಿನ ಪ್ರತಿಬಂಧಕವಿಲ್ಲದೆ ಜೀವವಿಮೆ ಮಾಡಲಾಗುತ್ತೆ. ಹೆಚ್ಚು ವಿಷಯಕ್ಕೂ, ಏಜೆಂಸಿಯ ಷರತ್ತಿಗೂ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮೈಸೂರು ಮತ್ತು ಕೊಡಗಿನ ಚೀಫ್ ಏಜೆಂಟ
927 ಚಾಮರಾಜ ಪುರಂ, ಮೈಸೂರು.

The Champion Metropolitan College of Commerce, Economics, Banking, etc.
YELWAL ROAD, MYSORE.
1925--26 Prospectus can be had free at the College or by post on receipt of ½ anna stamp to cover postage (5-6)

THE MYSORE PRESS
RAMAVILAS ROAD
MYSORE

We undertake to print
JOBS — BOOKS & PERIODICALS

Neat Workmanship
Moderate Charges
Prompt Execution

Colour & artistic work a speciality

Trial order solicited

B. S. MURTHY, B. A
Proprietor.

ಮೈಸೂರ್ ಪ್ರೆಸ್

ರಮಾವಿಲಾಸ ಅಗ್ರಹಾರ
ಮೈ ಸೂ ರು.

ನಮ್ಮಲ್ಲಿ ಎಲ್ಲಾ ವಿಧವಾದ ಚಿಕ್ಕ ಪುಟ್ಟ ಮುದ್ರಣ ಕಾರ್ಯವೂ, ಪುಸ್ತಕಗಳೂ, ಮಾಸಪತ್ರಿಕೆಗಳೂ ಸಕಾಲಕ್ಕೆ ಸುಲಭ ದರದಿಂದ ಮಾಡಲ್ಪಡುತ್ತೆ.

ದಯವಿಟ್ಟು ಗಮನಿಸಿ:—
ನಮ್ಮ ಮುದ್ರಣವು ಬಹು ಅಂದ!
ನಮ್ಮ ಅಕ್ಷರವು ಬಲು ಚೆಂದ!!
ನಮ್ಮ ಕೆಲಸ ನೋಡುವವರಿಗೆ
ನೇತ್ರಾನಂದ

ಬಿ. ಎಸ್. ಮೂರ್ತಿ, ಬಿ.ಎ
ಪ್ರೊಪ್ರೈಟರ್.

Printed and Published by B.S.Mu